KATK010006502022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.19/2022</u>**

ಪ್ರಾ.ಸಾ. ಃ **2**

ದೋ.ಸಾ. ಃ **1**

ದಿ.**13.10.2025**

| | |
|---|---|
| ಹೆಸರು | ಃ ಭೂಮೇಶ |
| ತಂದೆಯ ಹೆಸರು | ಃ ಲೇಟ್ ನಂಜಪ್ಪ |
| ವಯಸ್ಸು | ಃ **59** ವರ್ಷ |
| ಉದ್ಯೋಗ | ಃ ನಿವೃತ್ತ ಪಿಎಸ್ಐ |
| ವಾಸಸ್ಥಳ | ಃ ತುಮಕೂರು |

ಸಾಕ್ಷಿಯನ್ನು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. 2017 ರಿಂದ 2022 ರವರೆಗೆ ನಾನು ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.30.06.2021 ರಂದು ಹೊನ್ನುಡಿಕೆ ಉಪಠಾಣೆಯಲ್ಲಿ ನನ್ನನ್ನು ಕರ್ತವ್ಯಕ್ಕೆ ನೇಮಕ ಮಾಡಿದ್ದು, ಕರ್ತವ್ಯದಲ್ಲಿರುವಾಗ ಸಾಯಂಕಾಲ 4.00 ಗಂಟೆ ಸಮಯದಲ್ಲಿ ಬಾತ್ಮಿದಾರರಿಂದ ಹುಳ್ಳೇನಹಳ್ಳಿ ಗೇಟ್ ಬಳಿ ಹುಳ್ಳೇನಹಳ್ಳಿ ಗ್ರಾಮದ ವಾಸಿಯಾದ ಸೈಯದ್ ಇಲಿಯಾಜ್, ಶಹಬಾಜ್ ಖಾನ್ ಮತ್ತು ಕೌತುಮಾರನ ಹಳ್ಳಿ ಗ್ರಾಮದ ವಾಸಿ ಸೈಯದ್ ವಾಸಿಂ ಎಂಬುವವರು ಎಲ್ಲಿಂದಲೋ ಅಕ್ರಮವಾಗಿ ಗಾಂಜಾವನ್ನು ತಂದು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿತು. ಸದರಿ ಮಾಹಿತಿಯನ್ನು ಪಿಎಸ್ಐ ರವರಿಗೆ ದೂರವಾಣಿ ಮೂಲಕ ತಿಳಿಸಿ, ನನ್ನ ಜೊತೆಯಲ್ಲಿದ್ದ ಪಿಸಿ 988 ಯತೀಶ್, 1050 ನಂದೀಶ್ ರವರುಗಳಿಗೆ ವಿಷಯವನ್ನು ತಿಳಿಸಿ, ನಂತರ

ಹೆಬ್ಬೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಹಚ್ ಸಿ 463 ಮುನಿರಾಜು ಮತ್ತು ಸಿಹೆಚ್ ಸಿ 462 ಪದ್ಮನಾಭರವರಿಗೆ ವಿಚಾರವನ್ನು ತಿಳಿಸಿ ಹುಳ್ಳೇನಹಳ್ಳಿ ಗೇಟ್ ಬಳಿ ಬರಲು ದೂರವಾಣಿ ಮೂಲಕ ತಿಳಿಸಿದ್ದು, ನನ್ನ ಜೊತೆಯಲ್ಲಿದ್ದ ನಂದೀಶ್ ಮತ್ತು ಯತೀಶ್ ರವರನ್ನು ಕೂಡಾ ಕರೆದುಕೊಂಡು ಹುಳ್ಳೇನಹಳ್ಳಿ ಗೇಟಿನ ಬಳಿ ಕರೆದುಕೊಂಡು ಹೋಗಿದ್ದು, ಅಷ್ಟರಲ್ಲಿ ಹೆಬ್ಬೂರು ಠಾಣೆಯಿಂದ ಮುನಿರಾಜು ಮತ್ತು ಪದ್ಮನಾಭರವರು ಸಹ ಬಂದಿದ್ದು ಸದರಿ ವಿಚಾರವನ್ನು ಅವರಿಗೆ ತಿಳಿಸಿ, ಎಲ್ಲರೂ ಹುಳ್ಳೇನಹಳ್ಳಿ ಗೇಟಿನ ಬಳಿ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ 3 ಜನ ಆರೋಪಿತರು ಒಂದು ಕವರಿನಲ್ಲಿ ಗಾಂಜಾವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದುದು ಕಂಡುಬಂದಿತು. ನಂತರ ನಾನು ನನ್ನ ಜೊತೆಯಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯವರಿಗೆ ಅವರುಗಳ ಮೇಲೆ ಗಮನವಿರಿಸಿ ಎಲ್ಲಿಯೂ ಓಡಿಹೋಗದಂತೆ ನೋಡಲು ಸೂಚಿಸಿ, ನಂತರ ನಾನು 5.00 ಗಂಟೆಗೆ ಹೆಬ್ಬೂರು ಪೋಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲು ಠಾಣಾಧಿಕಾರಿಗೆ ವರದಿಯನ್ನು ನೀಡಿರುತ್ತೇನೆ. ಆ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ4(ಎ) ಎಂದು ಗುರುತಿಸಲಾಯಿತು.

3. ನಂತರ ಪಿಎಸ್ಐ ರವರೊಂದಿಗೆ ಮತ್ತು ಪಂಚರೊಂದಿಗೆ ಸ್ಥಳಕ್ಕೆ ಹೋಗಿ ಸ್ಥಳ ವನ್ನು ನಾನೇ ತೋರಿಸಿರುತ್ತೇನೆ. ಪಂಚರ ಸಮಕ್ಷಮ ಸೈಯದ್ ಶಹಬಾಜ್ ಕಡೆಯಿಂದ 700 ರೂ. ಮತ್ತು ಸೈಯದ್ ಇಲಿಯಾಜ್ ಕಡೆಯಿಂದ 600 ರೂ. ವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಆ ಸ್ಥಳದಲ್ಲಿದ್ದ ಸೈಯದ್ ವಾಸಿಂ ಕಡೆಯಿಂದ 250 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿರುತ್ತೇವೆ. ಸದರಿ 250 ಗ್ರಾಂ ಗಾಂಜಾವನ್ನು ಎರಡು ಭಾಗಗಳನ್ನಾಗಿ ಮಾಡಿ, ಎಫ್.ಎಸ್.ಎಲ್.ಗೆ ಕಳುಹಿಸಲು 100 ಗ್ರಾಂ ಮತ್ತು ಉಳಿದ 150 ಗ್ರಾಂ ಅನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು. 600 ರೂಪಾಯಿಯನ್ನು ಗಾಂಜಾ ಮಾರಾಟ ಮಾಡಿ ಬಂದಂತಹ ಹಣ ಮತ್ತು 700 ರೂಪಾಯಿ ಗಾಂಜಾ ಸೊಪ್ಪನ್ನು ಖರೀದಿ ಮಾಡಲು ಇಟ್ಟುಕೊಂಡ ಹಣ ಎಂದು ಆರೋಪಿತರು ಹೇಳಿದರು. ಆ ಸಮಯದಲ್ಲಿ ಮಾಡಿದ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ5 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ5(ಎ) ಎಂದು

ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಸಂಜೆ 5.45 ರಿಂದ 7.15 ಗಂಟೆಯವರೆಗೆ ಮಾಡಲಾಯಿತು. ಆ ದಿನ ಸಿಕ್ಕಿದ 3 ಜನ ಆರೋಪಿತರು ಈಗ ನ್ಯಾಯಾಲಯದ ಮುಂದೆ ಇದ್ದಾರೆ. ಹಣವನ್ನು ನೋಡಿದರೆ ಗುರುತಿಸುತ್ತೇನೆ. ಆ ಸಮಯದಲ್ಲಿ ಫೋಟೋ ತೆಗೆದಿದ್ದಾರೆ. ಅದು ಈಗ ತೋರಿಸಿದ ಮಹಜರಿನಲ್ಲಿದೆ. ಆ ದಿವಸ ಅಮಾನತ್ತುಪಡಿಸಿಕೊಂಡ ಸ್ಯಾಂಪಲ್ 100 ಗ್ರಾಂ ಗಾಂಜಾವನ್ನು ಸೀಲ್ಡ್ ಪ್ಯಾಕೇಟ್ ನಲ್ಲಿ ಈಗ ನೋಡುತ್ತಿದ್ದು ಸೀಲನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಆ ದಿನ 1 ನೇ ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ನಗದು ಹಣ ರೂಪಾಯಿ 600 ನ್ನು ಮು.ಮಾ.2 ಎಂದು ಮತ್ತು 700 ರೂಪಾಯಿಯನ್ನು ಮು.ಮಾ.3 ಎಂದು ಗುರುತಿಸಲಾಯಿತು. ಅದೇ ದಿನ ನನ್ನ ಹೇಳಿಕೆಯನ್ನು ಕೂಡಾ ಮಾಡಿಕೊಂಡರು.

4. ದಿ.01.07.2021 ರಂದು ಪಿಎಸ್ಐ ರವರ ಮೌಖಿಕ ಆದೇಶದ ಮೇರೆಗೆ ಸೈಯದ್ ವಾಸಿಂರವರು ಸೈಯದ್ ಖದೀರ್ ಮತ್ತು ಪವನ್ ಯಾದವ್ ರವರನ್ನು ತೋರಿಸುತ್ತೇನೆಂದು ಹೇಳಿದ ಮೇರೆಗೆ ಸೈಯದ್ ವಾಸಿಂರವನ್ನು ಠಾಣೆಯ ಹೆಚ್ ಸಿ 12 ಕೃಷ್ಣಮೂರ್ತಿಯವರ ಬೆಂಗಾವಲಿನೊಂದಿಗೆ ಸರ್ಕಾರಿ ವಾಹನದಲ್ಲಿ ಬೆಳಿಗ್ಗೆ 5.00 ಗಂಟೆಗೆ ಮೊದಲು ತುಮಕೂರಿನ ನಜರಾಬಾದ್ ಗೆ ಕರೆದುಕೊಂಡು ಹೋಗಿ ಸೈಯದ್ ಖದೀರ್ ರವರ ಮನೆ ಹತ್ತಿರ ಹೋಗಿ ನೋಡಲಾಗಿ ಸೈಯದ್ ಖದೀರ್ ಇಲ್ಲವೆಂದು ತಿಳಿಸಿದ್ದು, ನಂತರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಗೊಲ್ಲರಹಟ್ಟಿ ಯಲ್ಲಿ ಪವಸ್ ಯಾದವ್ ರವರನ್ನು ತೋರಿಸುತ್ತೇನೆಂದು ಹೇಳಿ ಗೊಲ್ಲರಹಟ್ಟಿ ತೋಟದ ಮನೆಯ ಹತ್ತಿರ ಹೋಗಿ ಪವನ್ ಯಾದವ್ ರವರನ್ನು ತೋರಿಸಿದರು. ಅವರನ್ನು ನಮ್ಮ ವಶಕ್ಕೆ ಪಡೆದು, ಠಾಣೆಗೆ ಬಂದು ಪಿಎಸ್ಐ ರವರ ಮುಂದೆ ಹಾಜರುಪಡಿಸಿರುತ್ತೇನೆ. ಪವನ್ ಯಾದವ್ ಈಗ ನ್ಯಾಯಾಲಯದ ಮುಂದೆ ಇದ್ದಾನೆ. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲು ಶ್ರೀ.ಆರ್.ವಿ.ದೊಡ್ಡಶಾಣಯ್ಯ ವಕೀಲರಿಂದ 1 ನೇ ಆರೋಪಿತನ ಪರವಾಗಿ :</u>**

5. 1 ನೇ ಆರೋಪಿ ಸೈಯದ್ ಇಲಿಯಾಜ್ ಹುಳ್ಳೇನಹಳ್ಳಿ ಗೇಟ್ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಸಿಬ್ಬಂದಿ ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ4 ರಂತೆ ನಾನು ವರದಿ ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಹತ್ತಿರ ಯಾವುದೇ ಮಾದಕ ವಸ್ತು ಇರಲಿಲ್ಲ, ಹಣ ಇತ್ತು. ಒಟ್ಟು 600 ರೂ. ಇತ್ತು, ಯಾವ ಯಾವ ನೋಟುಗಳು ಎಂದು ಈಗ ನೆನಪಿಲ್ಲ. ಎಷ್ಟು ಮುಖಬೆಲೆಯ ನೋಟುಗಳು ಎಂದು ಮಹಜರಿನಲ್ಲಿ ಬರೆದಿಲ್ಲ. ಅವನ ಯಾವ ಜೇಬಿನಲ್ಲಿ ಆ ಹಣ ಇತ್ತು ಎಂದು ನನಗೆ ಗೊತ್ತಿಲ್ಲ. ಪ್ಯಾಂಟ್ ಜೇಬಿನಲ್ಲಿ ಹಣ ಇತ್ತು, ಯಾವ ಬದಿಯ ಜೇಬು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಯಿಂದ ಹಣ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಧಿಕಾರಿಗಳ ಮಾತು ಕೇಳಿ, ಸುಳ್ಳು ವರದಿಯನ್ನು ಕೊಟ್ಟು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ.ಬಿ.ಕೆ.ಪ್ರಭುಸ್ವಾಮಿ ವಕೀಲರಿಂದ 2 ನೇ ಆರೋಪಿತನ ಪರವಾಗಿ :</u>**

6. ಹೊರ ಠಾಣೆಯಿಂದ ಹೆಬ್ಬೂರು ಪೋಲೀಸ್ ಠಾಣೆಗೆ 12-15 ಕಿ ಮೀ ಆಗುತ್ತದೆ. ಹೊರಠಾಣೆಯಿಂದ ಹುಳ್ಳೇನಹಳ್ಳಿ ಗೇಟ್ ಗೆ 2 ಕಿ ಮೀ ದೂರ. ನಾವು ಉಪ ಠಾಣೆಯಲ್ಲಿ ಠಾಣಾ ಡೈರಿ ಇಟ್ಟುಕೊಂಡಿದ್ದೇವೆ. ಆ ಡೈರಿಯಲ್ಲಿ ಯಾರು ಯಾರು ಕರ್ತವ್ಯ ನಿರ್ವಹಿಸುತ್ತಿದ್ದು, ಎಷ್ಟು ಗಂಟೆಗೆ ಬಂದರು ಎಂದು ನಮೂದಾಗಿರುತ್ತದೆ. ಆ ದಿನ ನಾವು ಮೂರು ಮಂದಿ 10.00 ಗಂಟೆಗೆ ಠಾಣೆಗೆ ಬಂದೆವು. ಆ ದಿನ ಒ.ಪಿ.ಯಲ್ಲಿ ಗಸ್ತು ಮಾಡಲು ತಿಳಿಸಿದ್ದರು, ಯಾರು ಯಾರಿಗೆ ಎಲ್ಲಿ ಗಸ್ತು ಮಾಡಬೇಕು ಎಂದು ಹೇಳಿಲ್ಲ. ನಮ್ಮ ಉಪ ಠಾಣೆಯಲ್ಲಿ ಎಷ್ಟು ಬೀಟ್ ಪಾಯಿಂಟ್ ಗಳು ಬರುತ್ತವೆ ಎಂದು ನನಗೆ ಗೊತ್ತಿಲ್ಲ. ಸಾಯಂಕಾಲ 5.00 ಗಂಟೆಗೆ ಹೆಬ್ಬೂರು ಪೋಲೀಸ್ ಠಾಣೆಗೆ ಹೋದೆವು, 10-15 ನಿಮಿಷಗಳಲ್ಲಿ ಪಿಎಸ್ಐ ರವರ ಜೊತೆಗೆ ಹೋದೆವು. ಆ ದಿನ 2 ನೇ ಆರೋಪಿ ಯಾವ ಕಲರ್ ನ ಪ್ಯಾಂಟಿನಲ್ಲಿ ಹಣ ಇಟ್ಟಿದ್ದ ಎಂದು ನೆನಪಿಲ್ಲ. ಪ್ಯಾಂಟಿನ ಯಾವ ಭಾಗದ ಜೇಬಿನಿಂದ ಹಣ ಕೊಟ್ಟನು ಎಂದು ನೆನಪಿಲ್ಲ. ಯಾವ ಮುಖಬೆಲೆಯ ಹಣವಿತ್ತು ಎಂದು ಗೊತ್ತಿಲ್ಲ. ಆ ದಿನ 2 ನೇ ಆರೋಪಿಯ ಜೇಬಿನಲ್ಲಿ ಹಣ ಇರಲಿಲ್ಲ, ಆ

ಹಣಕ್ಕೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೆ ತೊಂದರೆ ಕೊಡಬೇಕೆಂದು ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ವರದಿ ಕೊಟ್ಟು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀಮತಿ.ಚಿನ್ಮಯಿ ವಕೀಲರಿಂದ 3 ನೇ ಆರೋಪಿತನ ಪರವಾಗಿ :**

7. ಹುಳ್ಳೇನಹಳ್ಳಿ ಗೇಟ್ ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ನಿಜ. ಆ ಸಮಯದಲ್ಲಿ ಯಾರೂ ಇರಲಿಲ್ಲ. ಸೈಯದ್ ವಾಸಿಂ ಕಡೆಯಿಂದ ತೂಕ ಮಾಡಿ 250 ಗ್ರಾಂ ಗಾಂಜಾವನ್ನು ಅಮಾನತ್ತುಪಡಿಸಿಕೊಂಡಿದ್ದೇವೆ. ತೂಕದ ಯಂತ್ರ ಯಾವ ಕಂಪನಿಗೆ ಸೇರಿದ್ದು ಎಂದು ಗೊತ್ತಿಲ್ಲ. ಆ ದಿನ 3 ನೇ ಆರೋಪಿ ಸೈಯದ್ ವಾಸಿಂ ಅಲ್ಲಿರಲಿಲ್ಲ, ಅವನಿಂದ ಯಾವುದೇ ಗಾಂಜಾವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೈಯದ್ ಖದೀರ್ ಮತ್ತು ಪವನ್ ಯಾದವ್ ರವರ ಮನೆಯನ್ನು ತೋರಿಸುತ್ತೇನೆಂದು ಸೈಯದ್ ವಾಸಿಂ ಕರೆದುಕೊಂಡು ಹೋಗಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ವರದಿ ಕೊಟ್ಟು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಪ್ರಕಾಶ್ ಎಸ್. ವಕೀಲರಿಂದ 4 ನೇ ಆರೋಪಿತನ ಪರವಾಗಿ :**

8. 3 ನೇ ಆರೋಪಿ ಸೈಯದ್ ವಾಸಿಂ ಪವನ್ ಯಾದವ್ ಮನೆಗೆ ಕರೆದುಕೊಂಡು ಹೋಗಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್ ವಕೀಲರಿಂದ 5 ನೇ ಆರೋಪಿತನ ಪರವಾಗಿ:**

9. ದಿ.30.06.2021 ರಂದು ನಮ್ಮ ಕರ್ತವ್ಯ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಇತ್ತು ಎಂದರೆ ಬೆಳಿಗ್ಗೆ 8.30 ಗಂಟೆಯಿಂದ ರಾತ್ರಿ ನಾವು ಮನೆಗೆ ಹೋಗುವವರೆಗೆ. ಆ ದಿನ ಓ.ಪಿ.ಯಲ್ಲಿ ನಾನೇ ಇದ್ದೆನು. ದಿ.01.07.2021 ರಂದು ನನ್ನ ಕರ್ತವ್ಯ ಹೆಬ್ಬೂರು ಪೋಲೀಸ್ ಠಾಣೆಯಲ್ಲಿತ್ತು. ದಿ.01.07.2021 ರಂದು ಪಿಎಸ್ ಐ ರವರ ಮೌಖಿಕ ಆದೇಶದ ಮೇರೆಗೆ 3 ನೇ ಆರೋಪಿ 5 ನೇ ಆರೋಪಿ ಸೈಯದ್ ಖದೀರ್ ಮನೆ ತೋರಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೌಖಿಕ ಆದೇಶ ಕೊಟ್ಟಾಗ ನಾನು ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿ.01.07.2021 ರಂದು ನಾನು

ಸೈಯದ್ ವಾಸಿಂ ಜೊತೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆ ದಿನ ಸೈಯದ್ ಖದೀರ್ ಮನೆಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **3** ನೇ ಆರೋಪಿ ಸೈಯದ್ ಖದೀರ್ ಹೆಸರನ್ನು ಹೇಳಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು